ಕರ್ನಾಟಕ ಸರ್ಕಾರ

# ಜಲ ಸಂವರ್ಧನೆ ಯೋಜನಾ ಸಂಘ

ಜಿಲ್ಲಾ ಯೋಜನಾ ಘಟಕ, 'ಪುಷ್ಪಗಿರಿ', #775/9-11, ವಿದ್ಯುತ್ ನಗರ, ಲೋಕಿಕೆರೆ ಕ್ರಾಸ್ ಹತ್ತಿರ, ಹದಡಿ ಮುಖ್ಯರಸ್ತೆ, ದಾವಣಗೆರೆ-577005.

ದೂರವಾಣಿ ಸಂ. 08192 226301, ಈ ಮೈಲ್: dpudavanagere@gmail.com.

---

ಸಂಖ್ಯೆ: ಜೆ.ಎಸ್.ವೈ.ಸ್/ದಾ/ಪ್ರಕಟಣೆ/2010-11/ ದಿನಾಂಕ:16.08.2010.

## ಪ್ರಕಟಣೆ

ವಿಶ್ವ ಬ್ಯಾಂಕ್ ನೆರವಿನ ಜಲ ಸಂವರ್ಧನೆ ಯೋಜನಾ ಸಂಘದ ಸಮುದಾಯ ಆಧಾರಿತ ಕೆರೆ ನಿರ್ವಹಣೆ ಯೋಜನೆಯಡಿಯಲ್ಲಿ ದಾವಣಗೆರೆ ಜಿಲ್ಲೆಯ ಹರಪನಹಳ್ಳಿ, ಜಗಳೂರು, ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳಲ್ಲಿ ಆಯ್ದ ಕೆರೆಗಳಲ್ಲಿ ಮೀನುಗಾರಿಕೆ ಚಟುವಟಿಕೆ ನಡೆಸಲು ಮೀನುಮರಿಗಳನ್ನು ನಿಗದಿತ ಸಮಯದಲ್ಲಿ ಕೆರೆಗಳು/ಕೆರೆ ಸಂಘಗಳಿಗೆ ಸರಬರಾಜು ಮಾಡಲು ಕೊಟೇಷನ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸರಬರಾಜುದಾರರು ಈ ಕಛೇರಿಯಲ್ಲಿ ಕೊಟೇಶನ್ ನಮೂನೆಗಳನ್ನು ರೂ.250.00 ಡಿ.ಡಿಯನ್ನು ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ದಾವಣಗೆರೆ ರವರ ಹೆಸರಿಗೆ ನೀಡಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಸದರಿ ಕೊಟೇಶನ್‌ಗಳನ್ನು ಖರೀದಿಸಲು ದಿನಾಂಕ : **21.08.2010 ರಿಂದ 30.08.2010** ಸಂಜೆ 4.00 ಗಂಟೆ ನಿಗಧಿಪಡಿಸಲಾಗಿದೆ. ಭರ್ತಿಮಾಡಿದ ಕೊಟೇಶನ್‌ಗಳನ್ನು ದಿನಾಂಕ **31.08.2010 ಮಧ್ಯಾಹ್ನ 3.00** ಗಂಟೆಯೊಳಗೆ ಈ ಕಛೇರಿಯಲ್ಲಿ ಸಲ್ಲಿಸತಕ್ಕದ್ದು.

**ಸರಬರಾಜು ಮಾಡಬೇಕಾದ ಮೀನುಮರಿಗಳ ವಿವರಗಳು:**

| ಕ್ರ.ಸಂ | ಮೀನುಮರಿಗಳ ಪ್ರಮಾಣ | ಜಾತಿ ಮರಿಗಳು |
|---|---|---|
| 1 | **6,92,000 ಅಂದಾಜು ಮರಿಗಳು** | **70% ಕಾಟ್ಲಾ, 20% ಸಾಮಾನ್ಯ ಗೆಂಡೆ, 10% ರೋಹು, ಹುಲ್ಲುಗೆಂಡೆ ಮತ್ತು ಬೆಳ್ಳಿಗೆಂಡೆ** |

2.5 ರಿಂದ 3 ಇಂಚು ಮೇಲ್ಪಟ್ಟು ಗಾತ್ರದ ಅಂದಾಜು ಪ್ರಮಾಣ 6,92,000 ಮೀನುಮರಿಗಳ ಅವಶ್ಯಕವಾಗಿರುತ್ತದೆ. ಈ ಪ್ರಮಾಣವು ಅಂದಾಜು ಪ್ರಮಾಣವಾಗಿದ್ದು, ಸರಬರಾಜು ಹೆಚ್ಚಿಗೆ ಅಥವಾ ಕಡಿಮೆ ಸಹ ಮಾಡುವ ಅಧಿಕಾರ ಈ ಕೆಳಕಂಡ ಸಹಿ ಮಾಡಿರುವವರಿಗೆ ಇರುತ್ತದೆ.

**ಷರತ್ತುಗಳು:**

1. ನಿಗದಿಪಡಿಸಿದ ದಿನಾಂಕದೊಳಗೆ ಹಾಗೂ ಸಮಯದೊಳಗೆ ಸಲ್ಲಿಸಿದ ಕೊಟೇಶನ್‌ಗಳನ್ನು ಮುಚ್ಚಿದ ಲಕೋಟೆಯಲ್ಲಿ ಮಾತ್ರ ಪರಿಗಣಿಸಲಾಗುವುದು.
2. ಮೀನುಮರಿಗಳನ್ನು ಈ ಕಛೇರಿಯಿಂದ ನಿಗದಿಪಡಿಸಿದ ದಿನಾಂಕದೊಳಗೆ ಸೂಚಿಸಿದ ಕೆರೆಗಳಿಗೆ ವೈಜ್ಞಾನಿಕವಾಗಿ ಜೀವವಿರುವ ಮರಿಗಳನ್ನು ಸರಬರಾಜುಮಾಡಬೇಕಾಗಿರುತ್ತದೆ.
3. ಕೋಟೇಶನ್‌ಗಳನ್ನು ಅಂಗೀಕರಿಸುವ/ತಿರಸ್ಕರಿಸುವ ಅಧಿಕಾರ ಈ ಕಛೇರಿಯ ವ್ಯಾಪ್ತಿಗೆ ಇರುತ್ತದೆ.
4. ದರವನ್ನು 1 ಮರಿಗೆ ಸೂಚಿಸಲು ತಿಳಿಸಿದೆ (ವೈಜ್ಞಾನಿಕವಾಗಿ ಸಾಗಾಣಿಕೆ ಮಾಡಿರುವ ವೆಚ್ಚ ಸೇರಿಕೊಂಡಂತೆ).
5. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಹಾಗೂ ಈ ಇಲಾಖೆಯ ವೆಬ್‌ಸೈಟ್ www.jsysindia.org ನಲ್ಲಿ ಸಹ ಪಡೆಯಬಹುದಾಗಿದೆ.

ಸಹಿ/-

ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,

ಜಲ ಸಂವರ್ಧನೆ ಯೋಜನಾ ಸಂಘ,

ಜಿಲ್ಲಾ ಯೋಜನಾ ಘಟಕ,ದಾವಣಗೆರೆ.